# ಶ್ರೀಮಂತ ಗಾಯಕ ಅರಿಜಿತ್

**2020** ಎಲ್ಲ ದೃಷ್ಟಿಯಲ್ಲೂ ಅರಿಜಿತ್ ಸಿಂಗ್ ವರ್ಷವಾಗುವ ಸಂಭವವಿದೆ. ವರ್ಷದ ಮೊದಲ ಎರಡು ತಿಂಗಳಲ್ಲೇ ಅರಿಜಿತ್ ಸಿಂಗ್ ಹಾಡಿದ ಹತ್ತು ಹಾಡುಗಳು ಬಿಡುಗಡೆಯಾಗಿವೆ. 2019ರಲ್ಲಿ ಈತ ಹಾಡಿದ ಒಟ್ಟು 20 ಹಾಡುಗಳು ಸೂಪರ್‌ಹಿಟ್ ಆಗಿವೆ. ಸದ್ಯಕ್ಕೆ ಬಾಲಿವುಡ್‌ನ ಅತ್ಯಂತ ಶ್ರೀಮಂತ ಗಾಯಕ ಅರಿಜಿತ್ ಸಿಂಗ್. ಈ ವಿಷಯವನ್ನು ಫೋಬ್ಸ್, ಇಂಡಿಯಾ ಇತ್ತೀಚೆಗೆ ಪ್ರಕಟಿಸಿದ ಪ್ರಭಾವಶಾಲಿ 100 ಭಾರತೀಯರ ಪಟ್ಟಿ ಕೂಡಾ ದೃಢಪಡಿಸಿದೆ. ಈ ಪಟ್ಟಿಯಲ್ಲಿ ಅರಿಜಿತ್ ಸಿಂಗ್ 26ನೇ ಸ್ಥಾನ ಗಳಿಸಿದ್ದಾನೆ.

15 ವರ್ಷಗಳ ಹಿಂದೆ ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಎಂಬ ಸಣ್ಣ ಪಟ್ಟಣದಿಂದ ಮುಂಬೈಗೆ ಮೊದಲ ಸಲ ಬಂದಾಗ ಅರಿಜಿತ್‌ನಿಗೆ 18ರ ಹರೆಯ. ಊರಲ್ಲಿ ಶಾಸ್ತ್ರೀಯ ಸಂಗೀತ ಕಲಿಯುತ್ತಾ ದೊಡ್ಡ ಕನಸುಗಳನ್ನು ಕಟ್ಟಿಕೊಂಡಿದ್ದ ಆತ ಮೊದಲ ಬಾರಿ ಮುಂಬೈಗೆ ಬಂದದ್ದು ಟಿವಿಯ ರಿಯಾಲಿಟಿ ಶೋ 'ಫೇಮ್ ಗುರುಕುಲ್'ನಲ್ಲಿ ಸ್ಪರ್ಧಿಸಲು! ಆತನನ್ನು ಮುಂಬೈಗೆ ಕಳಿಸಿದ್ದು ಆತನಿಗೆ ಸಂಗೀತ ಕಲಿಸುತ್ತಿದ್ದ ಗುರು ರಾಜೇಂದ್ರ ಪ್ರಸಾದ್ ಹಜಾರಿ. 'ನಿನ್ನಲ್ಲಿ ಅಗಾಧ ಪ್ರತಿಭೆ ಇದೆ. ಈ ಸಣ್ಣ ಪಟ್ಟಣದಲ್ಲಿ ಇದ್ದರೆ, ಬರೀ ಶಾಸ್ತ್ರೀಯ ಸಂಗೀತ ಕಲಿತರೆ ಈಗಿನ ಕಾಲದಲ್ಲಿ ಏನೂ ಪ್ರಯೋಜನವಿಲ್ಲ. ಮುಂಬೈಗೆ ಹೊರಡು' ಎಂದು ಅವತ್ತು ಗುರು ಹೇಳಿದ ಮಾತು ಇವತ್ತು ಜೀವನದ ಮೂಲ ಸಂಗೀತದಂತೆ ಅರಿಜಿತ್‌ಗೆ ಕೇಳಿಸುತ್ತಿದೆ. ಇನ್ನೊಬ್ಬ ಗುರು ಧೀರೇಂದ್ರ ಪ್ರಸಾದ್ ಹಜಾರಿ ಅವರಿಂದ ಕಲಿಯುತ್ತಿದ್ದ ತಬಲಾ ಮತ್ತು ರವೀಂದ್ರ ಸಂಗೀತ ಕೂಡಾ ಅರಿಜಿತ್‌ನ ಕೈಹಿಡಿದಿದೆ. ಮುಂಬೈಯಲ್ಲೇ ನೆಲೆಸಲು ನಿರ್ಧರಿಸಿದಾಗ ಲೋಖಂಡವಾಲ ಪ್ರದೇಶದಲ್ಲಿ ಪುಟ್ಟದೊಂದು ಬಾಡಿಗೆ ಮನೆ ಹಿಡಿದಿದ್ದ ಅರಿಜಿತ್, ಬಿಡುವಿಲ್ಲದೆ ನಿರಂತರ ದುಡಿದು ಕಟ್ಟಿದ ಕನಸುಗಳೇ ಇವತ್ತು ಆತನನ್ನು ಬಾಲಿವುಡ್‌ನ ನಂಬರ್ ಒನ್ ಗಾಯಕನನ್ನಾಗಿಸಿವೆ. 9 ಕೋಟಿಯ ಮನೆಯ ಒಡೆಯನನ್ನಾಗಿಸಿದೆ. ಆದರೆ ಈ ಮಟ್ಟಕ್ಕೆ ಆತ ಬೆಳೆದು ನಿಲ್ಲಲು ಆತ ಕ್ರಮಿಸಿದ ದಾರಿ ಅಷ್ಟು ಸರಳವಾದದ್ದೇನೂ ಆಗಿರಲಿಲ್ಲ.

ಫೇಮ್ ಗುರುಕುಲ್ ಟೀವಿ ಶೋನಲ್ಲಿ ಈತನ ಮಧುರ ಕಂಠ ಎಲ್ಲರ ಗಮನ ಸೆಳೆಯಿತು. ಅದರಲ್ಲೂ ಶೋನಲ್ಲಿ ಹಾಜರಿದ್ದ ಖ್ಯಾತ ನಿರ್ದೇಶಕ ಬನ್ಸಾಲಿ ತಮ್ಮ ಹೊಸ ಚಿತ್ರ 'ಸಾವರಿಯಾ'ದಲ್ಲಿ ಹಾಡಲು ಅವಕಾಶ ನೀಡಿದರು. ಆ ಸಿನಿಮಾಕ್ಕೆ ಈತ ಹಾಡಿದ 'ಯುನ್ ಶಬ್ನಮಿ' ಎನ್ನುವ ಹಾಡು ಇಂಪಾಗಿಯೇ ಇತ್ತು. ಆದರೆ ಚಿತ್ರದ ಚಿತ್ರಕಥೆ ಬದಲಾಗಿ ಆ ಹಾಡಿನ ಅವಶ್ಯಕತೆಯೇ ಬೀಳಲಿಲ್ಲ! ಹಾಡು ಹೊರಬರಲೂ ಇಲ್ಲ! ಆ ಬಳಿಕ ಖ್ಯಾತ ನಿರ್ಮಾಪಕ ಕುಮಾರ್ ತೌರಾನಿ ಈತನ ಹಾಡಿದ ಹಾಡುಗಳ ಆಲ್ಬಂ ಹೊರತರುವ ಒಪ್ಪಂದಕ್ಕೆ ಸಹಿ ಹಾಕಿದರು. ಹಾಡಿಯೂ ಆಯಿತು, ಆಲ್ಬಂ ಸಿದ್ಧವಾಯಿತು. ಆದರೆ ಅದ್ಯಾಕೋ ಬಿಡುಗಡೆ ಕಾಣಲೇ ಇಲ್ಲ!



ಅರಿಜಿತ್ ಹುಮ್ಮಸ್ಸು ಕಳೆದುಕೊಳ್ಳಲಿಲ್ಲ. ಈ ಮಧ್ಯೆ ಇನ್ನೊಂದು ರಿಯಾಲಿಟಿ ಶೋ 'ದಸ್ ಕೆ ದಸ್ ಲೇ ಗಯಾ ದಿಲ್'ನಲ್ಲಿ ಅವಕಾಶ ಸಿಕ್ಕಿತು. ಎಲ್ಲರ ಮನಗೆದ್ದ ಅರಿಜಿತ್, ಹತ್ತು ಲಕ್ಷ ರೂಪಾಯಿಗಳ ಬಹುಮಾನ ಮೊತ್ತ ಗೆದ್ದ. ಅದಾಗಲೇ ಆತ ಮುಂಬೈಯ ಮಾಯಾಲೋಕಕ್ಕೆ ಮನಸೋತು ಆಗಿತ್ತು. ರೇಡಿಯೊ ಮತ್ತು ಟೀವಿ ಚಾನೆಲ್‌ಗಳ ಜಾಹೀರಾತುಗಳಿಗೆ ಹಾಡುವುದಲ್ಲದೆ ಸಂಗೀತ ಸಂಯೋಜಿಸುವುದನ್ನೂ ಶುರು ಮಾಡಿದ. ತನಗೆ ಸಿಕ್ಕ ಹತ್ತು ಲಕ್ಷ ರೂಪಾಯಿ ಬಹುಮಾನದ ಮೊತ್ತವನ್ನೇ ಬಳಸಿಕೊಂಡು ಮುಂಬೈ ಹೊರವಲಯದಲ್ಲಿ ಸಣ್ಣದೊಂದು ಸ್ಟುಡಿಯೊ ಮಾಡಿಕೊಂಡ.

ಬಾಲಿವುಡ್ ಮೇಲೆ ಒಂದು ಕಣ್ಣು ಇದ್ದೇ ಇತ್ತು. ಆ ಕಾಲಕ್ಕೆ ಪ್ರಸಿದ್ಧರಾಗಿದ್ದ ಸಂಗೀತ ನಿರ್ದೇಶಕರಾದ ಶಂಕರ್ ಎಹ್ಸಾನ್ ಲಾಯ್, ವಿಶಾಲ್‌ಶೇಖರ್, ಮಿಥೂನ್ ಮತ್ತು ಮೋಂಟಿ ಶರ್ಮಾ ಅವರ ಜೊತೆಗೆ ಸಂಗೀತ ಸಹಾಯಕನ ಕೆಲಸಕ್ಕೆ ತೊಡಗಿದ. ಇದೇ ವೇಳೆ ಇನ್ನೊಬ್ಬ ಪ್ರಸಿದ್ಧ ಸಂಗೀತ ನಿರ್ದೇಶಕ ಪ್ರೀತಮ್ ಜೊತೆಗೆ ಕೆಲಸಕ್ಕೆ ಅವಕಾಶ ಸಿಕ್ಕಿತು. ಬಾಲಿವುಡ್‌ಗೆ ಏನು ಬೇಕು ಎನ್ನುವುದು ಅರಿಜಿತ್‌ಗೆ ಗೊತ್ತಾಗತೊಡಗಿತ್ತು. ಹಾಗೆ ಗೊತ್ತಾದ ಬಳಿಕ ಮೊದಲ ಸಂಗೀತ ನಿರ್ದೇಶನದ ಆಲ್ಬಂ ನಿರ್ಮಿಸಿದ.

ಅರಿಜಿತ್ ಅಜ್ಜಿ, ಸೋದರತ್ತೆ ಹಾಡುತ್ತಿದ್ದರು. ಅಮ್ಮ ಹಾಡುವುದರ ಜೊತೆಗೆ ತಬಲಾ ನುಡಿಸುತ್ತಿದ್ದರು. ಮೂರರ ಎಳವೆಯಲ್ಲೇ ಮನೆಯವರು ಸಂಗೀತದ ತರಗತಿಗೆ ಸೇರಿಸಿದ್ದರು. 9ರ ವಯಸ್ಸಿನಲ್ಲಿ ರಾಜ್ಯ ಸರ್ಕಾರದಿಂದ ಭಾರತೀಯ ಶಾಸ್ತ್ರೀಯ ಸಂಗೀತ ಕಲಿಕೆಗೆ ಸ್ಕಾಲರ್‌ಶಿಪ್ ಸಿಕ್ಕಿತ್ತು. ಮುಂಬೈಯ ಪ್ರಖ್ಯಾತ ಸಂಗೀತ ನಿರ್ದೇಶಕರು ಹಿನ್ನೆಲೆ ಗಾಯನಕ್ಕೆ ಕರೆಯತೊಡಗಿದರು.

ಆರಂಭದಲ್ಲಿ ನಾಲ್ಕೈದು ಸಿನಿಮಾಗಳಲ್ಲಿ ಹಾಡಿದರೂ, ಅರಿಜಿತ್‌ಗೆ ಸ್ಟಾರ್‌ಪಟ್ಟ ಕೊಟ್ಟದ್ದು 'ಆಶಿಕಿ 2' ಚಿತ್ರದ 'ತುಮ್ ಹೀ ಹೊ' ಎನ್ನುವ ಹಾಡು.

ಮುಂದಿನ ಏಪ್ರಿಲ್ 25ಕ್ಕೆ ಅರಿಜಿತ್‌ಗೆ 33 ವರ್ಷ ತುಂಬುತ್ತದೆ. ಬಾಲಿವುಡ್ ಸಿನಿಮಾಗಳಲ್ಲಿ ಆತನ ಮಾಧುರ್ಯದ ಧ್ವನಿ ಇವತ್ತು ಅನಿವಾರ್ಯ. ಆದರೆ ಆತನಿಗೆ ಮೊದಲ ಸಿನಿಮಾ ಹಾಡು ಹಾಡಲು ತೆಲುಗಿನ 'ಕೇಡಿ' ಚಿತ್ರದಲ್ಲಿ ಅವಕಾಶ ಕೊಟ್ಟಿದ್ದು ಕನ್ನಡಿಗ ಸಂಗೀತ ನಿರ್ದೇಶಕ ಸಂದೀಪ್ ಚೌಟ. ಬಂಗಾಳಿ ಭಾಷೆಯಲ್ಲಿ 'ಭಲೋಬಸರ್ ರೋಜ್ನಾಮ್ಚ' ಎನ್ನುವ ಸಿನಿಮಾವೊಂದನ್ನು ನಿರ್ದೇಶಿಸಿರುವ ಅರಿಜಿತ್ ಅದನ್ನು ಹಲವು ಅಂತರರಾಷ್ಟ್ರೀಯ ಚಿತ್ರೋತ್ಸವಗಳಿಗೂ ಕಳಿಸಿದ್ದಾನೆ. ಸ್ವತಃ ಗಿಟಾರ್, ಹಾರ್ಮೋನಿಯಂ, ಪಿಯಾನೋ ಮತ್ತು ತಬಲಾ ನುಡಿಸುತ್ತಿರುವ ಈತ ಸ್ವಂತದ ಎನ್‌ಜಿಓ ಒಂದನ್ನು ಸ್ಥಾಪಿಸಿ ಬಡಮಕ್ಕಳ ಶಿಕ್ಷಣಕ್ಕೆ ನೆರವಾಗುವ ಕೆಲಸವನ್ನೂ ಮಾಡುತ್ತಿದ್ದಾನೆ. 2019ರಲ್ಲಿ ಆನ್‌ಲೈನ್‌ನಲ್ಲಿ 'ಅತ್ಯಧಿಕ ಸ್ಟ್ರೀಮಿಂಗ್ ಮಾಡಲಾದ ಗಾಯಕ' ಎನ್ನುವ ಹೆಗ್ಗಳಿಕೆಯೂ ಈತನದ್ದು. ನಾಲ್ಕು ವರ್ಷಗಳ ಹಿಂದೆ ಪ್ರಶಸ್ತಿ ಸಮಾರಂಭವೊಂದರಲ್ಲಿ ಸಲ್ಮಾನ್ ಖಾನ್ ಕುರಿತು ಸಣ್ಣ ತಮಾಷೆ ಮಾಡಿ, ಆತನ ಚಿತ್ರಗಳಿಂದ ಅಲಿಖಿತ 'ನಿಷೇಧ'ಕ್ಕೆ ಒಳಗಾಗಿರುವುದು ಮಾತ್ರ ಈತನನ್ನು ಈಗಲೂ ಬಾಧಿಸುತ್ತಿರುವ ನೋವು.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65